ಹೋಗಿ ಕೂತಿದ್ರೆ ಅದೆಂಥಾ ಚಂದ? ನಾಕು ದಿನ ಎಲ್ಲಾ ರಗಳೆ ಮರೆತು ಆರಾಮಾಗಿ ಇರ್ಬೇಕು ಅಂತ ನೀನು ಬರ್ತಿದ್ದಿದ್ದು...'

'ಅಯ್ಯೋ ಬಿಡಮ್ಮಾ, ಅಪ್ಪ ನನ್ನ ಕೈಯಡುಗೆ ಉಂಡು ಯಾವ ರಾಯನ ಕಾಲ ಆಯ್ತೋ? ಈ ಹೆಳೇಲಾದ್ರೂ ಅವರನ್ನ ನೋಡ್ಕೋತೀನಿ'.

'ಹಂಗಾದ್ರೆ ಒಬ್ಳೇ ಹೊರಟುಬಿಡೋದು ಅಂತೀಯಾ?'

'ಕಣೆ ಕೇಳು...'

ಮಗಳು ಇಷ್ಟು ಕುಮ್ಮಕ್ಕು ಕೊಟ್ಟ ಮೇಲೆ, ಅಲ್ಲಿ ಗಂಡ ಬಸ್ಸು ಹತ್ತಿಸಿ, ಇಲ್ಲಿ ಮಗ ಬಸ್ಸು ಇಳಿಸಿಕೊಂಡು, ಮೊಮ್ಮಗನ ಮುಖ ನೋಡಿದ್ದೇ ಪಂಕಜಾಕ್ಷಿಯ ಮುಖ ಅರಳಿಹೋಗಿತ್ತು. ನಾಮಕರಣದ ದಿನ ಬೀಗರ ಮನೆಯಲ್ಲಿ ನೋಡಿದ್ದೆಷ್ಟೋ ಅಷ್ಟೇ. ಆಗ ಹಿಡಿತಕ್ಕೆ ಸಿಗದ ಎಳೆ ಬೊಮ್ಮಟೆ ಈಗ ಮೈ ತುಂಬಿಕೊಂಡು ದೃಷ್ಟಿ ತಾಕುವಂತಾಗಿದ್ದಾನೆ. ಮೈಕೈ ನುಗ್ಗಾಗಿಸಿಕೊಂಡು ಎಂಟು ಗಂಟೆ ಬಸ್ ಪ್ರಯಾಣ ಮಾಡಿ ಬಂದಿದ್ದು ಸಾರ್ಥಕ ಅನಿಸಿತ್ತು. ಇದಕ್ಕೂ ಬೇಕು ಯೋಗ. ಗಂಡನಿಗೆ ಅವರ ಜಮೀನು, ಮನೆ ಇದೇ ಹೆಚ್ಚಾಗಿ ಹೋಯ್ತು. 'ನೆಲ ಸುಟ್ಟು ಅನ್ನ ಹಾಕಿದಾರೆ' ಅನ್ನುವಂತೆ ಹುಟ್ಟಿ ಬೆಳೆದ ಹಳ್ಳಿಯೇ ಕಾಶಿ, ಕೈಲಾಸ ಎಲ್ಲಾ ಆಯ್ತು. ಮಗನ ಮನೆಯ ವ್ಯವಹಾರ, ರೀತಿನೀತಿಗಳು ಒಂಥರಾ ವಿಚಿತ್ರ ಅನಿಸಿದರೂ ಅವರಿಗೆ ಅದೇ ಅಭ್ಯಾಸವಾಗಿಬಿಟ್ಟಿದೆ. ಹೊರಗಡೆ ಕೆಲಸಕ್ಕೆ ಹೋಗುವವರಿಗೆ ಮನೆಯಲ್ಲಿ ಮಗುವನ್ನು ನೋಡಿಕೊಳ್ಳುವುದಕ್ಕಾದರೂ ಬೇಕಲ್ಲ ಜನ? ಅವಳೇನೋ ಅನಿವಾರ್ಯ. ಆದರೆ ಅಡುಗೆ ಮಾಡಿಕೊಳ್ಳಲೂ ಪುರುಸೊತ್ತಿಲ್ಲ ಅಂದರೆ?

ಅಡುಗೆಗೊಬ್ಬಳು, ಬೆಳಗಿಂದ ರಾತ್ರಿಯವರೆಗೆ ಮಗು ನೋಡಿಕೊಳ್ಳುವುದಕ್ಕೊಬ್ಬಳು, ಬಟ್ಟೆ, ಪಾತ್ರೆ, ಗುಡಿಸು, ವರೆಸು ಎಂದು ಮತ್ತೊಬ್ಬಳು, ಕೊನೆಗೆ ಕಾರಿಗೆ ಡ್ರೈವರ್ ಕೂಡ. ಇವರಿಗೆಲ್ಲಾ ಸೇರಿಸಿ ಎಷ್ಟು ಸಂಬಳ ಕೊಡಬಹುದು ಎಂದು ತಮ್ಮ ಮನಸ್ಸಲ್ಲೇ ಕೂಡಿ, ಗುಣಿಸಿ ಲೆಕ್ಕ ಹಾಕಿ ಪಂಕಜಾಕ್ಷಿ ಬೆವರು ವರೆಸಿಕೊಂಡಿದ್ದರು. ಲಕ್ಷಗಟ್ಟಲೆ ದುಡ್ಡು ಹೊರಗಿನವರಿಗೇ ಹುಡಿ ಎದ್ದು ಹೋಗುತ್ತದೆ. ಯಾರ್‍ಯಾರದ್ದೋ ಹೊಟ್ಟೆ ತುಂಬಿಸುವುದಕ್ಕೆ ಇವರು ಹೊರಗೆ ಹೋಗಿ ದುಡಿಯಬೇಕಾ? ಅದರ ಬದಲು ಸೊಸೆ ಕೆಲಸ ಬಿಟ್ಟು ಮನೆಯಲ್ಲಿದ್ದರೆ ಅಷ್ಟು ಹಣ ಉಳಿತಾಯ ಮಾಡಿದಂತಾಗುವುದಿಲ್ಲವಾ? ತಮಗೆ ಬೇಕಾದ್ದನ್ನು ತಾವೇ ಅಟ್ಟು ಉಂಡು, ತಮ್ಮ ಮಗುವನ್ನು ತಾವೇ ನೋಡಿಕೊಂಡು, ನಿರ್ಯೋಚನೆಯಿಂದ ಕಾಲ ಹಾಕಬಹುದಿತ್ತು. ಮನಸ್ಸು ತಡೆಯದೆ ಒಂದು ರಜಾ ದಿನ ಮಗನನ್ನು ತಡವಿ ಇಳಿದನಿಯಲ್ಲಿ ಈ ಪ್ರಶ್ನೆ ಕೇಳಿದ್ದರು ಪಂಕಜಾಕ್ಷಿ.

ಮಗ ಅಂದಮೇಲೆ ಇಷ್ಟು ಸಲಿಗೆ ಇರುವುದಿಲ್ಲವಾ? ಇಷ್ಟು ಸಲಿಗೆ ಬೇಡವಾ? ಕಾಲೇಜಿಗೆ ಸೇರಿಕೊಳ್ಳುವಷ್ಟು ಬೆಳೆದಾಗಲೂ 'ಅಮ್ಮಾ, ಕಕ್ಕಸಿಗೆ ಹೋಗಿ ಬರ್ತೀನಿ...' ಎನ್ನುವ ವರದಿ ಒಪ್ಪಿಸಿ ಹೋಗುತ್ತಿದ್ದವನು ಮಗ.

'ಹೋಗ್ಬೇಡ ಅನ್ನು ಅಮ್ಮಾ, ಹೋಗ್ಬೇಡ ಅನ್ನು ಅಮ್ಮಾ...' ಕೀಟಲೆ ಮಾತಾಡುತ್ತಿದ್ದಳು ಮಗಳು.

ಎಷ್ಟೇ ದೊಡ್ಡ ಕೆಲಸದಲ್ಲಿರಲಿ, ದೊಡ್ಡ ಮನುಷ್ಯ ಆಗಿರಲಿ, ಮಗ ಅಂದರೆ ಮಗನೇ. ತಮ್ಮ ಸೆರಗು ಹಿಡಿದು ಓಡಾಡಿಕೊಂಡಿದ್ದ ಮಗ.

'ಅಲ್ವೋ, ಇಷ್ಟೊಂದು ಜನರನ್ನ ಪುಗಸಟ್ಟೆ ಸಾಕ್ತಿದೀರಲ್ಲ, ದುಡ್ಡು ಗಿಡದಿಂದ ಉದುರುತ್ತಾ?' ಸಣ್ಣದೊಂದು ಅಸಹನೆ. ಸಣ್ಣದೊಂದು ಕುತೂಹಲ.

'ನಾಲ್ಕು ಜನರನ್ನ ಸಾಕೋದು ಅಂದ್ರೆ ಪುಣ್ಯದ ಕೆಲಸ ಅಲ್ವಾ ಅಮ್ಮ?'

'ಹಂಗಂತ? ಖರ್ಚು ಮಾಡೋಕೂ ಒಂದು ಲಿಮಿಟ್ ಇರಲ್ವಾ?'

'ಇದೆಲ್ಲಾ ನಿಂಗೊತ್ತಾಗಲ್ಲ ಅಮ್ಮಾ. ಟ್ಯಾಕ್ಸ್ ಕಟ್ಟೋ ಬದಲು ನಾಲ್ಕು ಜನಕ್ಕೆ ಉಪಕಾರ ಆದರೆ ಒಳ್ಳೇದೋ, ಕೆಟ್ಟದ್ದೋ? ಅವರಿಗೂ ನೆಲೆ, ನಮಗೂ ಸುಖ...'

'ಹಂಗಂದ್ರೆ?'

'ಹೇಳಿದ್ನಲ್ಲಾ ಅಮ್ಮಾ, ನಿಂಗೊತ್ತಾಗಲ್ಲ. ನೀನು ತಲೆಬಿಸಿ ಮಾಡ್ಕೊಳ್ದೆ ನಿನ್ನಷ್ಟಕ್ಕೆ ನೀನು ಹಾಯಾಗಿದ್ಬಿಡು...'

ತಮಾಷಿ ಅಂದರೆ 'ನಿಂಗೊತ್ತಾಗಲ್ಲ ಅಮ್ಮಾ' ಎಂದು ಮಗ ಹೇಳಿದರೆ ಬೇಸರವಾಗಿರಲಿಲ್ಲ. ಅದೇ ಸೊಸೆ ಆ ಮಾತು ಹೇಳಿದರೆ ಮನಸ್ಸಿಗೆ ಯಾಕೆ ಗೀರಿದಂತಾಗಬೇಕು? ಗಾದೆಯೇ ಉಂಟಲ್ಲ, 'ಅಕ್ಕಸಾಲಿ ಕಿವಿ ಚುಚ್ಚಿದರೆ ನಚ್ಚಗೆ' ಅಂತ. ಅದೇ ಬೇರೆ ಯಾರೋ ಚುಚ್ಚಿದರೆ ನೋವಾಗಿಬಿಡುತ್ತದೆ. ತಮಗೆ ಹೇಳುವ ಹಕ್ಕು ಮಗನಿಗೆ ಮಾತ್ರ ಉಂಟು ಅನ್ನುವ ನಂಬಿಕೆ.

ಯಾಕೋ ಬಂದಾಗಿನಿಂದ ಈ ಅಡುಗೆ ಕೆಲಸದವಳು ಪಂಕಜಾಕ್ಷಿಗೆ ಪಥ್ಯ ಆಗಿರಲಿಲ್ಲ. ಕೆಲವರ ಮುಖ ನೋಡುತ್ತಿದ್ದಂತೆ ಅವರು ಇಷ್ಟವಾಗುವುದು, ಕೆಲವರು ಅಪಥ್ಯ ಅನಿಸುವುದು ಎಲ್ಲದಕ್ಕೂ ಪೂರ್ವಜನ್ಮದ ಯಾವುದೋ ವಾಸನೆ ಇದೆಯೆಂದು ಪಂಕಜಾಕ್ಷಿಯ ನಂಬಿಕೆ. ಎಡಗೈಯಿಂದ ಬಡಿಸಿಕೊಂಡು ಉಂಡರೆ ಹಿತವಾಗುವುದಿಲ್ಲ ಅವರಿಗೆ. ಹಾಗಾಗಿ ಅಪರೂಪಕ್ಕೆ ಮನೆಗೆ ಬಂದ ಅತ್ತೆಮ್ಮನಿಗೆ ಊಟ ಬಡಿಸುವ ಹೊಣೆಗಾರಿಕೆಯನ್ನು ಅಡುಗೆಯವಳಿಗೆ ವಹಿಸಿದ್ದಳು ಸೊಸೆಮುದ್ದು. ದೊಡ್ಡ ಕೈ ಪಂಕಜಾಕ್ಷಿಯದು. ಊಟ ಮಾಡುತ್ತಿದ್ದವರು 'ಸಾಕು' ಎಂದು ಕೈ ಅಡ್ಡ ಹಿಡಿದ ಮೇಲೂ ಸಟ್ಟುಗದಿಂದ ಎರಡು ತುತ್ತು ಅನ್ನ ಜಾರಿಸುವುದು ಅವರ ಅಭ್ಯಾಸ.

ಗಂಡನಿಗೂ ಅಷ್ಟೇ, ನೆಂಟರಿಗೂ ಅಷ್ಟೇ. ಅದನ್ನು ಬೇರೆಯವರಿಂದಲೂ ಅವರು ನಿರೀಕ್ಷೆ ಮಾಡುವುದು ಅವರ ಹೆಡ್ಡುತನವೇ ಇರಬಹುದು. 'ಸಾಕು' ಎಂದು ಅವರು ಕೈ ಅಡ್ಡ ಹಿಡಿಯುತ್ತಿದ್ದಂತೆ ಅಡುಗೆಯಾಕೆ ಹಿಡಿದ ಪಾತ್ರೆಯಿಂದ ಒಂದು ಅಗುಳು ಅನ್ನ ಜಾಸ್ತಿ ಬಿದ್ದರೆ ಅವಳ ಹೆಸರೇ ಸುಳ್ಳು. ದೋಸೆ ಗೀಸೆ ಮಾಡಿದರೆ 'ಇನ್ನೊಂದು ಹಾಕ್ಲಾ ಅಮ್ಮ?' ಎಂದು ಅವಳು ಕೇಳುವ ರೀತಿಗೇ ಮೈ ಉರಿಯುತ್ತದೆ ಪಂಕಜಾಕ್ಷಿಗೆ. ಅವರ ಅಪ್ಪನ ಮನೆಯಿಂದ ತಂದಿದ್ದನ್ನು ಮಾಡಿ ಹಾಕುತ್ತಾಳಾ? ಮಗ, ಸೊಸೆಗೆ ಬೇಕಾದಷ್ಟು ಹಾಕಿಸಿಕೊಂಡು ತಿನ್ನುವುದು ಅಭ್ಯಾಸವಾಗಿದ್ದರೂ ಈ ಕ್ರಮಕ್ಕೆ ಒಗ್ಗಿಕೊಳ್ಳಬೇಕಾದರೆ ವಾರ ಹಿಡಿದಿತ್ತು ಪಂಕಜಾಕ್ಷಿಗೆ.

'ಇನ್ನೊಂಸ್ವಲ್ಪ ಸಾರು ಹಾಕು', 'ಇನ್ನೊಂಸ್ವಲ್ಪ ಮೊಸರು ಬಡಿಸು' ಎಂದು ಕೇಳಿ ಹಾಕಿಸಿಕೊಳ್ಳುವಷ್ಟು ಅವರನ್ನು ಪಳಗಿಸಿದ್ದಳು ಮಹಾತಾಯಿ. ಮಗ, ಸೊಸೆಗೆ ಬರುವುದಕ್ಕಿಂತ ಹೆಚ್ಚು ಫೋನ್ ಕರೆಗಳು ಈ ಹೆಂಗಸಿಗೆ ಬರುತ್ತವೆ ಎಂದು ಪಂಕಜಾಕ್ಷಿಯ ಮತ್ತೊಂದು ಅಸಹನೆ. ತರಕಾರಿ ಹೆಚ್ಚುವಾಗಲೂ, ಕುಕ್ಕರ್ ಜೋಡಿಸುವಾಗಲೂ ಬ್ರಹ್ಮಕಪಾಲದಂತೆ ಕಪಾಲಕ್ಕೆ ಅಂಟಿಕೊಂಡಿರುತ್ತದೆ ಫೋನು. 'ಅದೆಂಥಾ ರಾಜಕಾರ್ಯ ಇರುತ್ತಪ್ಪಾ?' ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದ ಪಂಕಜಾಕ್ಷಿಗೆ ಅವಳ ಮೇಲೆ ಒಳಗೊಳಗೇ ಶೇಖರವಾಗಿದ್ದ ಅಸಹನೆ ಹೊರ ಹಾಕಲು ಒಲೆಯ ಮೇಲಿಟ್ಟಿದ್ದ ಪಲ್ಯ ಸೀಯುತ್ತಾ ಬಂದಿದ್ದು ಒಂದು ನೆಪವಾಗಿತ್ತು. ತಾವೇ ಗ್ಯಾಸ್ ಸ್ಟೌ ಆಫ್ ಮಾಡಿದ್ದರು ಮತ್ತು ಯಜಮಾನಿಕೆಯ ಗತ್ತಿನಿಂದ ಕೇಳಿದ್ದರು,

'ಜ್ಞಾನ ಎಲ್ಲಿಟ್ಟಿದೀಯೇ? ಮಾಡೋ ಕೆಲಸದ ಮೇಲೆ ನಿಗಾ ಇರ್ಲಿ...'

ತಮ್ಮ ಮನೆಯ ಸಂಬಳ ತಿನ್ನುವ ಕೆಲಸದವರಿಗೆ ಯಾರೂ ಇಷ್ಟು ಹೇಳುವುದಿಲ್ಲವಾ? ಹೇಳುವಷ್ಟು ಅಧಿಕಾರ ಇಲ್ಲವಾ? ಎಷ್ಟು ಜನ ಕೆಲಸದವರಿಗೆ ದಬಾವಣೆ ಹಾಕಿ ಅಂಕೆಯಲ್ಲಿಟ್ಟುಕೊಂಡಿರಲಿಲ್ಲ ಅವರು? ಕಡ್ಡಿಯನ್ನು ಗುಡ್ಡ ಮಾಡಿದ್ದಳು ಅಡುಗೆ ಹೆಂಗಸು. ಸಂಜೆ ಮನೆಗೆ ಬಂದ ಸೊಸೆಗೆ ಕಾಫಿ, ತಿಂಡಿ ಸಪ್ಲೈ ಮಾಡುತ್ತಾ ಅವಳ ಕಿವಿ ಕಚ್ಚಿದ್ದಳು. ಹಾಗೆಂದು ಪಂಕಜಾಕ್ಷಿಯ ಊಹೆ. ಆ ಹೊತ್ತು ಅವರು ಟೀವಿ ಧಾರಾವಾಹಿಗಳಲ್ಲಿ ಕಂಠಮಟ್ಟ ಮುಳುಗಿ ಹೋಗಿರುತ್ತಾರೆ. ತಿಂಡಿ ತಿಂದು ಕೈ ತೊಳೆದು ಬಂದ ಸೊಸೆ ಅವರ ಸನಿಹದಲ್ಲಿ ಕೂತಿದ್ದಳು. ಅವಳನ್ನು ಕಂಡು ಪಂಕಜಾಕ್ಷಿಗೆ ಹುರುಪು ಏರಿತ್ತು. 'ಲಾಯ್ಬುಂಟು ಕಣೇ ಕತೆ. ಮನೆ ಒಳಗೇ ಇದ್ಗಂಡು ಕಿತಾಪತಿ ಮಾಡೋ ಹೆಂಗಸ್ರೂ ಇರ್ತಾರಲ್ಲ, ಒಂದೇ ಮನೇಲಿದ್ರೂ ಒಬ್ರ ಮಕ ಕಂಡ್ರೆ ಮತ್ತೊಬ್ರಿಗೆ ಆಗಲ್ಲ. ಆಶ್ಚರ್ಯ ಮಾರಾಯ್ತಿ. ಪಾಪ, ಇದೆಲ್ಲಾ ನೋಡ್ತಾ ಕೂತಿರೋಕೆ ನಿಂಗೆಲ್ಲಿರುತ್ತೆ ಪುರುಸೊತ್ತು?' ಯಾವುದೋ ಘನವಾದುದನ್ನು ಸೊಸೆ ಕಳೆದುಕೊಳ್ಳುತ್ತಿದ್ದಾಳೆಂಬಂತೆ ಉದ್ಗರಿಸಿದ್ದರು. ಮಾತಾಡಿರಲಿಲ್ಲ ಸೊಸೆ. ಆ ಸಮಯದಲ್ಲಿ ಪಂಕಜಾಕ್ಷಿಗೂ ಮಾತು ಬೇಕಿರಲಿಲ್ಲ. ಒಂದು ಅಂಕ ಮುಗಿದು ಜಾಹೀರಾತು ಆರಂಭವಾದಾಗ ಸೊಸೆಯ ಕಡೆ ತಿರುಗಿ ಕೇಳಿದ್ದರು ಪಂಕಜಾಕ್ಷಿ,

'ಇವತ್ತು ಬೇಗ ಬಂದ್ಯನೇ?'

'ಹೂಂ ಅತ್ತೆ'.

'ಪಾಪ, ಮಗೂಗೆ ಹಾಲು ಕುಡಿಸ್ಬೇಕಾಗಿತ್ತು'.

'ಮಲಗಿದಾನಲ್ಲ'.

ಸ್ವಲ್ಪ ಹೊತ್ತು ಮೌನ, ಟೀವಿಯ ಸದ್ದನ್ನುಳಿದು.

'ಒಂದು ಮಾತು ಅತ್ತೆ, ಬೇಜಾರು ಮಾಡ್ಕಂಬೇಡಿ' ಪೀಠಿಕೆ ಹಾಕಿದ್ದಳು ಸೊಸೆ. ಅತ್ತೆಯ ಕಿವಿ ನೆಟ್ಟಗಾಗಿತ್ತು. ಎದೆಬಡಿತ ಕೂಡ ಕೊಂಚ ಏರಿತ್ತು. ತಮಗೆ ಬೇಜಾರಾಗುವಂಥ ಸುದ್ದಿ ಯಾವುದಪ್ಪಾ? ಗಂಡನಿಗೇನಾದರೂ ಹುಷಾರು